**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**
**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸ್ಪೆಷಲ್ ಕೇಸ ನಂಃ 232/2017

ಪಿಡಬ್ಲು : 9 ಸಿಡಬ್ಲು : 9

| | |
|---|---|
| ಸಾಕ್ಷಿಯ ಹೆಸರು | : ಶಿವಾನಂದ ಪ್ರಕಾಶ ಅಗಸಗಿ |
| ವಯಸ್ಸು | : 27 ವರ್ಷ |
| ಉದ್ಯೋಗ | : ಚಾಲಕ |
| ವಾಸ್ತವ್ಯ | : ಗೋರಾಮಟ್ಟಿ |
| ದಿನಾಂಕ | : 07-03-2020 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. |

**ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ**

ಚಾಸಾ-1 ಗೊತ್ತು . ಆತನು ನನಗೆ ಮೊದಲಿನಿಂದಲೂ ಪರಿಚಯ ಇರುತ್ತಾನೆ . ಆರೋಪಿತರನ್ನು ನಾನು ನೋಡಿರುತ್ತೇನೆ .

ದಿನಾಂಕಃ 04-04-2017 ರಂದು ನಾನು ಬೆಳಗಾವಿಯಿಂದ ಯಾದವಾಡಕ್ಕೆ ಹೋಗಿದ್ದೆ , ಅಲ್ಲಿ ವಸತಿ ಇದ್ದು ಮಾರನೇ ದಿವಸ ಬೆಳಗ್ಗೆ 10.00 ಗಂಟೆಗೆ ಕಲ್ಲು ತೆಗೆಯುವ ಕೆಲಸಕ್ಕೆ ಹೋಗಿದ್ದೆ , ಮದ್ಯಾಹ್ಞ 12.00 ಗಂಟೆ ಸಮಯದಲ್ಲಿ ಆಗ ಚಾಸಾ-1 ಸ್ತಳಕ್ಕೆ ಬಂದರು . 12.30 ಗಂಟೆಗೆ ಬಿಸಿಲು ಹೆಚ್ಚಿಗೆ ಇದ್ದದರಿಂದ ನೆರಳಿಗೆ ನಿಂತುಕೊಳ್ಳಲು ಹೋಗಿದ್ದರು .

ಆ ಸಮಯದಲ್ಲಿ ಆರೋಪಿತರು ಆ ಸ್ತಳಕ್ಕೆ ಬಂದು ನಾವು ತೆಗೆದುಕೊಳ್ಳುವ ಜಾಗೆಯನ್ನು ನೀವು ತೆಗೆದುಕೊಂಡಿದ್ದೀರಾ ಅಂತಾ ಜಗಳ ಮಾಡಿದರು , ಜಾತಿ ಬೇಧ ಭಾವ ಮಾಡಿ , ಕೀಳು ಜಾತಿ ಎಂದು ಬೈದು ಹೊಡಿ ಬಡಿ ಮಾಡುತ್ತಿದ್ದರು . ಆ ಸಮಯದಲ್ಲಿ ಪರಶುರಾಮ ಚೀರಿಕೊಳ್ಳುತ್ತಿದ್ದ , ನಾವು ಆ ಸ್ತಳಕ್ಕೆ ಹೋಗುವಷ್ಟರಲ್ಲಿ ಆರೋಪಿತರು ಅವನನ್ನು ಹೊಡೆದು ಕಟ್ಟಿಗೆ

ಅಲ್ಲೆ ಎಸೆದು ಓಡಿ ಹೋದರು .

ಪರಶುರಾಮ ಇವರು ಚಾಸಾ-1 ಇವರ ತಂದೆಯಾಗಬೇಕು . ಪರಶುರಾಮ ಈತನ ತಲೆಗೆ , ಕಿವಿಗೆ , ಮುಖಕ್ಕೆ ಆರೋಪಿ-1 ಕಲ್ಲಿನಿಂದ ಹೊಡೆದ . ಆರೋಪಿ-2 ಬಡಿಗೆಯಿಂದ ಪರಶುರಾಮ ಇವರ ಬಲಗಾಲಿಗೆ ಹೋಡೆದ . ಆರೋಪಿ-3 ಬೆನ್ನಿಗೆ , ಕಾಲಿಗೆ , ಬಡಿಗೆಯಿಂದ ಪರಶುರಾಮ ಈತನಿಗೆ ಹೊಡೆದ . ಆ ಸಮಯದಲ್ಲಿ ನಾನು ಚಾಸಾ-10 ಕಿರಣ , ಸುಭಾಷ ಇದ್ದೆವು .

ನಂತರ ಪರಶುರಾಮನನ್ನು ಸ್ಥಳದಿಂದ ಮುಧೋಳದ ಆಸ್ಪತ್ರೆಗೆ ಕರೆದುಕೊಂಡು ಹೋದೆವು , ಅಲ್ಲಿ ದಾಖಲು ಮಾಡಿದೆವು . ನಂತರ ಚಾಸಾ-1 ನನಗೆ ಫೋನ ಮಾಡಿ ಬೆಳಗಾವಿ ಆಸ್ಪತ್ರೆಗೆ ನನ್ನ ತಂದೆಯನ್ನು ಕರೆದುಕೊಂಡು ಬಂದಿದ್ದೇವೆ ಎಂದು ಹೇಳಿದ . ನಂತರ ಚಾಸಾ-1 ಇವನು ನನ್ನ ತಂದೆ ದಿನಾಂಕಃ 22-04-2019 ಮರಣ ಹೊಂದಿರುತ್ತಾರೆ ಎಂದು ತಿಳಿಸಿದ . ನಿಪಿ-6,7 ಫೋಟೋ ನೋಡುತ್ತಿದ್ದು ಮೃತ ವ್ಯಕ್ತಿ ಚಾಸಾ-1 ಇವರ ತಂದೆಯಾಗಿರುತ್ತಾರೆ .

ಆ ದಿವಸ ಹಲ್ಲೆಗೆ ಬಳಸಿದ ದೊಣ್ಣೆ , ಬಡಿಗೆ ನೋಡಿದರೆ ಗುರುತಿಸುತ್ತೇನೆ . ಅವುಗಳನ್ನು ಮುಮಾ-1 ರಿಂದ 4 ಎಂದು ಈಗಾಗಲೇ ಗುರುತಿಸಲಾಗಿದೆ . ಆ ದಿವಸ ಹಲ್ಲೆ ಮಾಡಿದ ವ್ಯಕ್ತಿಗಳು ನ್ಯಾಯಾಲಯದ ಮುಂದಿರುವ ಆರೋಪಿತರಾಗಿರುತ್ತಾರೆ . ಇದಕ್ಕೆ ಸಂಬಂಧಪಟ್ಟಂತೆ ಪೋಲಿಸರು ನನ್ನ ವಿಚಾರಣೆ ಮಾಡಿ ಹೇಳಿಕೆ ಮಾಡಿಕೊಂಡಿರುತ್ತಾರೆ .

**<u>ಪಾಟೀ ಸವಾಲು: ಶ್ರೀ. ಬಿ ಎಸ ಡಿ ವಕೀಲರಿಂದ ಆರೋಪಿತನ ಪರವಾಗಿ</u>**

ಆರೋಪಿ ಪರ ವಕೀಲರು ಈ ಕೇಸಿನ ಪ್ರತ್ಯಕ್ಷ ಸಾಕ್ಷಿದಾರರನ್ನು ಸಂಬಂಧಿಕ ಸಾಕ್ಷಿಗಳನ್ನು ಎಲ್ಲರನ್ನೂ ಒಂದೇ ದಿವಸ ಪಾಟೀ ಸವಾಲು ಮಾಡುವ ಬಗ್ಗೆ ದಂಡ ಪ್ರಕ್ರೀಯಾ ಸಂಹಿತೆ ಕಲಂ 323(2) ರ ಅಡಿಯಲ್ಲಿ ಸಲ್ಲಿಸಿದ್ದು ಅರ್ಜಿಯನ್ನು ದಿನಾಂಕಃ 27-09-2019 ರಂದು ಪುರಸ್ಕರಿಸಿದ್ದರಿಂದ ಪಾಟೀ ಸವಾಲಿಗೆ ಸಮಯ ನೀಡಲಾಯಿತು .

**ಮರು ಸವಾಲು ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನ ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಎಂ ಹೆಚ ಅಣ್ಣಯ್ಯನವರ)
3 ನೇ ಹೆಚ್ಚುವರಿ ಸತ್ರ ನ್ಯಾಯಾಧೀಶರು, ಬೆಳಗಾವಿ.